# ಅಧ್ಯಾಯ–IV

# ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ

## 4.1 ಪರಿಚಯ

ಬಿಎಲ್‌ಸಿ ಘಟಕದಡಿಯಲ್ಲಿ ಹೊಸ ಮನೆಗಳನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಅವರ ಮನೆಗಳನ್ನು ಸ್ವಂತವಾಗಿ ಅಭಿವೃದ್ಧಿಗೊಳಿಸಲು ಇಡಬ್ಲ್ಯೂಎಸ್ ಫಲಾನುಭವಿಗಳಿಗೆ ₹1.50 ಲಕ್ಷ ಕೇಂದ್ರ ನೆರವನ್ನು ಒದಗಿಸಲಾಗುತ್ತದೆ. ಹಿಂದಿನ ರಾಜ್ಯ ವಲಯದ ವಸತಿ ಯೋಜನೆಗಳನ್ನು ಪಿಎಮ್‌ಎವೈ(ಯು) ನೊಂದಿಗೆ ಒಗ್ಗೂಡಿಸಲಾಯಿತು ಮತ್ತು ₹1.50 ಲಕ್ಷ ಕೇಂದ್ರದ ನೆರವಿನ ಜೊತೆಗೆ ಸಾಮಾನ್ಯ ಮತ್ತು ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಕ್ರಮವಾಗಿ ₹1.20 ಲಕ್ಷ ಮತ್ತು ₹2.00 ಲಕ್ಷ ರಾಜ್ಯದ ನೆರವನ್ನು ಒದಗಿಸಲಾಯಿತು. ಒಗ್ಗೂಡಿಸದ ಯೋಜನೆಗಳಡಿಯಲ್ಲಿ ಫಲಾನುಭವಿಗಳು ಕೇವಲ ₹1.50 ಲಕ್ಷ ಕೇಂದ್ರದ ನೆರವು ಮಾತ್ರ ಪಡೆದಿದ್ದರು. ಮಾರ್ಚ್ 2021 ರಲ್ಲಿದ್ದಂತೆ ಅನುಮೋದಿಸಲಾದ ಬಿಎಲ್‌ಸಿ ಯೋಜನೆಗಳು ಮತ್ತು ವಸತಿ ಘಟಕಗಳ ಸಂಖ್ಯೆಯು ಈ ಕೆಳಗಿನಂತಿದೆ:

**ಕೋಷ್ಟಕ–4.1: 31 ಮಾರ್ಚ್ 2021ರಲ್ಲಿದ್ದಂತೆ ಅನುಮೋದಿತವಾದ ಬಿಎಲ್‌ಸಿ ಯೋಜನೆಗಳ ವಿವರಗಳು**

| ಬಿಎಲ್‌ಸಿ ಘಟಕ | ಅನುಮೋದಿತ ಯೋಜನೆಗಳ ಸಂಖ್ಯೆ | ಅನುಮೋದಿತ ವಸತಿ ಘಟಕಗಳ ಸಂಖ್ಯೆ |
|---|---|---|
| ಬಿಎಲ್‌ಸಿ (ಒಗ್ಗೂಡಿದ ರಾಜ್ಯ ಯೋಜನೆಗಳು) | 1380 | 143960 |
| ಬಿಎಲ್‌ಸಿ (ಒಗ್ಗೂಡಿಸದ ರಾಜ್ಯ ಯೋಜನೆಗಳು) | 792 | 68960 |
| **ಒಟ್ಟು** | **2172** | **212920** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

ಬಿಎಲ್‌ಸಿ ಘಟಕದ 2172 ಯೋಜನೆಗಳಡಿಯಲ್ಲಿ ಅನುಮೋದಿಸಲಾದ 2,12,920 ವಸತಿ ಘಟಕಗಳಲ್ಲಿ ಕೇವಲ 66,558 ವಸತಿ ಘಟಕಗಳು (ಶೇಕಡಾ 31) ಮಾತ್ರ ಪೂರ್ಣಗೊಂಡಿದ್ದವು ಮತ್ತು 98,725 ವಸತಿ ಘಟಕಗಳು (ಶೇಕಡಾ 46) ಮಾರ್ಚ್ 2021 ರಲ್ಲಿದ್ದಂತೆ ಇನ್ನೂ ಪ್ರಾರಂಭವಾಗಬೇಕಿದೆ.

ಮೇಲಿನ ಯೋಜನೆಗಳ ಒಟ್ಟು ಹಣಕಾಸಿನ ವೆಚ್ಚವು ₹ 8225.88 ಕೋಟಿಗಳಾಗಿದ್ದು ಅದರಲ್ಲಿ ಭಾರತ ಸರ್ಕಾರದ ಪಾಲು ₹3317.90 ಕೋಟಿಗಳು ಮತ್ತು ಕರ್ನಾಟಕ ಸರ್ಕಾರದ ಪಾಲು ₹ 2466.04 ಕೋಟಿಗಳು. ಬಾಕಿ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಿತ್ತು. 31 ಮಾರ್ಚ್ 2021 ರಂತೆ ಬಿಎಲ್‌ಸಿ ಘಟಕಗಳ ಅಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವರ್ಷವಾರು ಪಾಲು ಬಿಡುಗಡೆಗಳು ಮತ್ತು ವೆಚ್ಚವನ್ನು **ಕೋಷ್ಟಕ 4.2** ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 4.2: ಬಿಎಲ್‌ಸಿ ಘಟಕಗಳ ಅಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವರ್ಷವಾರು ಪಾಲು ಬಿಡುಗಡೆಗಳು ಮತ್ತು ವೆಚ್ಚ.**

**(₹ ಕೋಟಿಗಳಲ್ಲಿ)**

| ವರ್ಷ | ಬಿಡುಗಡೆಯಾದ ಅನುದಾನ | | | ಮಾಡಲಾದ ವೆಚ್ಚ | | |
|---|---|---|---|---|---|---|
| | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು |
| 2015–16 | --- | 13.28 | 13.28 | --- | 13.28 | 13.28 |
| 2016–17 | --- | 183.92 | 183.92 | 48.37 | 183.92 | 232.29 |
| 2017–18 | 357.24 | 524.80 | 882.04 | 177.64 | 524.80 | 702.44 |
| 2018–19 | 224.61 | 330.48 | 555.09 | 494.22 | 330.48 | 824.70 |
| 2019–20 | 221.78 | 123.16 | 344.94 | 102.25 | 123.16 | 225.41 |
| 2020–21 | 360.20 | 80.02 | 440.22 | 38.89 | 80.02 | 118.91 |
| **ಒಟ್ಟು** | **1163.83** | **1255.66** | **2419.49** | **861.37** | **1255.66** | **2117.03** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

31 ಮಾರ್ಚ್ 2021 ರಂತೆ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ತಮ್ಮ ಅನುಮೋದಿತ ₹5783.94 ಕೋಟಿಗಳಲ್ಲಿ ಕೇವಲ ₹2419.49 ಕೋಟಿಗಳನ್ನು (ಶೇಕಡಾ 42) ಬಿಡುಗಡೆ ಮಾಡಿದೆ. ಘಟಕಗಳ ಅಡಿಯಲ್ಲಿ ಕಳಪೆ ಪ್ರಗತಿಗೆ ಕಾರಣಗಳನ್ನು ಕೆಳಗೆ ನೀಡಲಾಗಿದೆ:

## 4.2 ಫಲಾನುಭವಿಗಳನ್ನು ಲಗತ್ತಿಸುವ ಕೊರತೆಯಿಂದಾಗಿ ಕೇಂದ್ರದ ನೆರವನ್ನು ಬಿಡುಗಡೆ ಮಾಡದಿರುವುದು

ಅನುಮೋದಿತ 2172 ಬಿಎಲ್‌ಸಿ ಯೋಜನೆಗಳಿಗೆ ಭಾರತ ಸರ್ಕಾರದ ಒಟ್ಟು ಪಾಲು ₹3317.90 ಕೋಟಿಯಾಗಿತ್ತು. ಸಿಎಸ್‌ಎಮ್‌ಸಿಯ ಅನುಮೋದನೆಯ ನಂತರ ರಾಜ್ಯಗಳಿಗೆ ವಿವಿಧ ಘಟಕಗಳಡಿಯಲ್ಲಿ ಕೇಂದ್ರದ ನೆರವನ್ನು ಶೇಕಡಾ 40, ಶೇಕಡಾ 40 ಮತ್ತು ಶೇಕಡಾ 20ರ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಬೇಕೆಂದು ಪಿಎಂಎವೈ(ಯು) ಮಾರ್ಗಸೂಚಿಗಳು ನಿಗದಿಪಡಿಸಿದ್ದವು. ಯೋಜನೆಯಲ್ಲಿ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿದ ನಂತರ ಮಾತ್ರ ಬಿಎಲ್‌ಸಿ ಯೋಜನೆಗಳಿಗೆ ಕೇಂದ್ರದ ಸಹಾಯದ ಮೊದಲ ಕಂತನ್ನು ಬಿಡುಗಡೆ ಮಾಡಬೇಕೆಂದು ಸಿಎಸ್‌ಎಮ್‌ಸಿ ಸಹ ಸೂಚಿಸಿತ್ತು (ಅಕ್ಟೋಬರ್ 2017). 27ನೇ ಸಭೆಯ ನಂತರ ಸಿಎಸ್‌ಎಮ್‌ಸಿ ಅನುಮೋದಿಸಿದ 1720 ಬಿಎಲ್‌ಸಿ ಯೋಜನೆಗಳಲ್ಲಿ ಕೇವಲ 1231 ಯೋಜನೆಗಳಲ್ಲಿ (72 ಶೇಕಡಾ) ಮಾತ್ರ ಎಲ್ಲಾ ಫಲಾನುಭವಿಗಳ ಆಧಾರ್ ಲಿಂಕಿಂಗ್ ಪೂರ್ಣಗೊಂಡಿತ್ತು (ಮಾರ್ಚ್ 2021). ಉಳಿದ ಯೋಜನೆಗಳಲ್ಲಿ ಫಲಾನುಭವಿಗಳ ಆಧಾರ್ ಲಿಂಕಿಂಗ್ ಪೂರ್ಣಗೊಂಡಿರಲಿಲ್ಲ ಮತ್ತು ಪಿಎಮ್‌ಎವೈ ಎಮ್‌ಐಎಸ್ ಲಗತ್ತಿಸಲಾಗಿಲ್ಲವಾದ್ದರಿಂದ, ಭಾರತ ಸರ್ಕಾರ ತನ್ನ ಪಾಲಿನ ಮೊದಲ ಕಂತಾದ ₹569.56 ಕೋಟಿಯನ್ನು ಬಿಡುಗಡೆ ಮಾಡಲಿಲ್ಲ.

## 4.3 ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ಬಿಡುಗಡೆ ಮಾಡದಿರುವುದು

ಯೋಜನೆಯ ಬಿಎಲ್‌ಸಿ ಘಟಕದಡಿಯಲ್ಲಿ ಆರ್ಥಿಕ ನೆರವನ್ನು ಮರುಪಾವತಿ ಆಧಾರದ ಮೇಲೆ, ಅಂದರೆ ನಿರ್ಮಾಣದಲ್ಲಿ ಸಾಧಿಸಿದ ಪ್ರಗತಿಗೆ ಪ್ರತಿಯಾಗಿ, ಬಿಡುಗಡೆ ಮಾಡಲಾಗಿತ್ತು. ಹಾಗಾಗಿ ಯೋಜನೆಯಡಿಯಲ್ಲಿ

ಕೈಗೆತ್ತಿಕೊಂಡ ಮನೆಗಳನ್ನು ಪೂರ್ಣಗೊಳಿಸಲು ನೆರವನ್ನು ಸಮಯೋಚಿತವಾಗಿ ಬಿಡುಗಡೆ ಮಾಡುವುದು ನಿರ್ಣಾಯಕವಾಗಿದೆ. ನಿರ್ಮಾಣದ ಪ್ರಗತಿಯನ್ನು ಆಧರಿಸಿ ನಾಲ್ಕು ಕಂತುಗಳಲ್ಲಿ ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಮೂಲಕ ಫಲಾನುಭವಿಗಳಿಗೆ ಪಾವತಿಗಳನ್ನು ಮಾಡಲಾಗಿತ್ತು. ಫಲಾನುಭವಿಗಳು ಸ್ವೀಕರಿಸಿದ ಹಂತವಾರು ಪಾವತಿಗಳಿಗೆ[18] ಸಂಬಂಧಿಸಿದ ದತ್ತಾಂಶದ ಲೆಕ್ಕಪರಿಶೋಧನಾ ವಿಶ್ಲೇಷಣೆಯು, **ಕೋಷ್ಟಕ-4.3ರಲ್ಲಿ** ಸೂಚಿಸಿದಂತೆ, ನಿರ್ಮಾಣದಲ್ಲಿನ ಪ್ರಗತಿಗೆ ಅನುಗುಣವಾಗಿ ಆರ್ಥಿಕ ನೆರವಿನ ಕೊರತೆಯನ್ನು ತಿಳಿಯಪಡಿಸಿತು:

**ಕೋಷ್ಟಕ-4.3: 31 ಮಾರ್ಚ್ 2021ರಲ್ಲಿದ್ದಂತೆ ಬಿಎಲ್‌ಸಿ ಘಟಕದಡಿಯಲ್ಲಿ ಫಲಾನುಭವಿಗಳು ಪಡೆದ ಹಂತವಾರು ಪಾವತಿಯ ವಿವರಗಳು**

| ಪಿಎಮ್‌ಎವೈ ಎಮ್‌ಐಎಸ್ ಅನ್ವಯ ಪ್ರಗತಿಯ ಸ್ಥಿತಿ | ಕೇಂದ್ರ ನೆರವು (ಒಟ್ಟುಗೂಡಿಸಿದ ರಾಜ್ಯ ಯೋಜನೆಗಳು) | | ರಾಜ್ಯ ಯೋಜನೆಗಳು (ಒಟ್ಟುಗೂಡಿಸಿದ ರಾಜ್ಯ ಯೋಜನೆಗಳು) | | ಕೇಂದ್ರ ನೆರವು (ಒಟ್ಟುಗೂಡಿಸದ ಯೋಜನೆಗಳು) | |
|---|---|---|---|---|---|---|
| | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ |
| ತಳಹದಿ | 4323 | 2436 | 8158 | 5352 | 12489 | 3087 |
| ಲಿಂಟಲ್ | 4089 | 2419 | 7330 | 5173 | 763 | 99 |
| ಛಾವಣಿ | 6229 | 3530 | 10179 | 7492 | 747 | 43 |
| **ಒಟ್ಟು** | **14641** | **8385** | **25667** | **18017** | **13999** | **3229** |

**ಆಧಾರ: ಆರ್‌ಜಿಹೆಚ್‌ಸಿಎಲ್ ನಿಂದ ಪಡೆದ ಮಾಹಿತಿ**

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ಫಲಾನುಭವಿಗಳು ನಿರ್ಮಾಣದ ನಿಗದಿತ ಪ್ರಗತಿಯನ್ನು ಸಾಧಿಸಿದ್ದರೂ ಸಹ ರಾಜ್ಯದ ಒಟ್ಟುಗೂಡಿಸಿದ ಮತ್ತು ಒಟ್ಟುಗೂಡಿಸದ ಯೋಜನೆಗಳಿಗೆ ಸಂಬಂಧಿಸಿದಂತೆ 6256 (ಶೇಕಡಾ 43) ಮತ್ತು 10770 (ಶೇಕಡಾ 77) ಪ್ರಕರಣಗಳಲ್ಲಿ ಪಾವತಿಗೆ ಕೇಂದ್ರದ ಪಾಲು ಬಾಕಿ ಉಳಿದಿತ್ತಾದರೆ ಒಟ್ಟುಗೂಡಿಸಿದ ಯೋಜನೆಗಳಲ್ಲಿ ರಾಜ್ಯದ ಪಾಲು 7650 ಪ್ರಕರಣಗಳಲ್ಲಿ (ಶೇಕಡಾ 30) ಪಾವತಿಗೆ ಬಾಕಿ ಉಳಿದಿತ್ತು. ಪಾವತಿಗಳನ್ನು ಬಿಡುಗಡೆ ಮಾಡದ ಕಾರಣ ಫಲಾನುಭವಿಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಲಿಲ್ಲ ಮತ್ತು ತತ್ಪರಿಣಾಮವಾಗಿ ಕಾಮಗಾರಿಯು ಸ್ಥಗಿತಗೊಂಡಿತ್ತು.

ಜಂಟಿ ತಪಾಸಣೆಯ ಸಂದರ್ಭದಲ್ಲಿ ರಾಜ್ಯದ ಒಟ್ಟುಗೂಡಿಸಿದ ಬಿಎಲ್‌ಸಿ ಯೋಜನೆಗಳಡಿಯಲ್ಲಿ ತೆಗೆದುಕೊಳ್ಳಲಾದ 111 ಅಪೂರ್ಣ ಮನೆಗಳಿಗೆ ಲೆಕ್ಕಪರಿಶೋಧನೆಯು ಭೇಟಿ ನೀಡಿತು. ಭೇಟಿ ನೀಡಿದ 111 ಮನೆಗಳಲ್ಲಿ, 69 ಮತ್ತು 12 ಮನೆಗಳಿಗೆ ಸಂಬಂಧಿಸಿದಂತೆ ಭೌತಿಕ ಪ್ರಗತಿಯ ನೈಜ ಹಂತಗಳಿಗೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯ ನೆರವನ್ನು ಬಿಡುಗಡೆ ಮಾಡಿರಲಿಲ್ಲ. ಕೇಂದ್ರದ ನೆರವು ಬಿಡುಗಡೆಯಾಗದ 69 ಫಲಾನುಭವಿಗಳ ಪೈಕಿ 53 ಫಲಾನುಭವಿಗಳನ್ನು ಫಲಾನುಭವಿ ಸಮೀಕ್ಷೆಯಲ್ಲಿ ಲೆಕ್ಕಪರಿಶೋಧನೆಯು ಸಂದರ್ಶಿಸಿತು. ಸರ್ಕಾರದಿಂದ ಆರ್ಥಿಕ ನೆರವು ಬಿಡುಗಡೆಯಾಗದ ಕಾರಣ ತಾವು ಪ್ರಾರಂಭಿಸಿದ ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು. ಒಟ್ಟುಗೂಡಿಸದ ಯೋಜನೆಯಡಿಯಲ್ಲಿ ಮಂಜೂರಾದ 164 ಮನೆಗಳಿಗೆ ಲೆಕ್ಕಪರಿಶೋಧನೆಯು ಜಂಟಿ ತಪಾಸಣೆ ಮಾಡಿ 124 ಫಲಾನುಭವಿಗಳ ಸಮೀಕ್ಷೆ ನಡೆಸಿತು. ಸಮೀಕ್ಷೆಯಲ್ಲಿ ಕೆಳಕಂಡ ಅಂಶಗಳು ಕಂಡುಬಂದವು:

[18] ಪೂರ್ಣಗೊಂಡಿರುವುಗಳನ್ನು ಹೊರತುಪಡಿಸಿ

- 51 ಪ್ರಕರಣಗಳಲ್ಲಿ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಿದೆ ಮತ್ತು 61 ಪ್ರಕರಣಗಳಲ್ಲಿ ಅಪೂರ್ಣವಾಗಿವೆ. ನಿರ್ಮಾಣ ಪೂರ್ಣಗೊಳಿಸಿದ ಕೇವಲ ಐದು ಫಲಾನುಭವಿಗಳಿಗೆ ಮಾತ್ರ ಕೇಂದ್ರದ ನೆರವು ಬಿಡುಗಡೆಯಾಗಿದೆ.
- ಸರ್ಕಾರದಿಂದ ಕೇವಲ ₹1.50 ಲಕ್ಷದ ನೆರವಿನಲ್ಲಿ ಮನೆಗಳನ್ನು ನಿರ್ಮಿಸುವುದು ಆರ್ಥಿಕವಾಗಿ ಲಾಭದಾಯಕವಲ್ಲ ಮತ್ತು ಕಾಮಗಾರಿಗಳನ್ನು ಪ್ರಾರಂಭಿಸಲು ಸಿದ್ಧರಿಲ್ಲ ಎಂದು ಸಮೀಕ್ಷೆ ನಡೆಸಿದ 37 ಫಲಾನುಭವಿಗಳು ತಿಳಿಸಿದರು.
- ಸಹಾಯಧನ ಬಿಡುಗಡೆಯಾಗದ ಕಾರಣ 43 ಫಲಾನುಭವಿಗಳು ಮನೆ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸಿದ್ದು, ಇದ್ದ ಮನೆಗಳನ್ನು ಕೆಡವಿ ತಾತ್ಕಾಲಿಕ ಶೆಡ್‌ಗಳಲ್ಲಿ ವಾಸಿಸುತ್ತಿದ್ದಾರೆ.

ಮಾರ್ಚ್ 2021ರ ಅಂತ್ಯಕ್ಕೆ ಯೋಜನಾ ಖಾತೆಯಲ್ಲಿ ₹566.53 ಕೋಟಿ ಲಭ್ಯವಿದ್ದರೂ ಸಹ ಎಸ್‌ಎಲ್‌ಎನ್‌ಎ ಫಲಾನುಭವಿಗಳಿಗೆ ಪಾವತಿಗಳನ್ನು ಬಿಡುಗಡೆ ಮಾಡಲಿಲ್ಲ. ಸಕಾಲದಲ್ಲಿ ಪಾವತಿಗಳನ್ನು ಬಿಡುಗಡೆ ಮಾಡದ ಕಾರಣ ಫಲಾನುಭವಿಗಳಿಗೆ ಕಷ್ಟದ ಜೊತೆಗೆ ಕೆಲಸದ ಪ್ರಗತಿಯೂ ಸಹ ಸ್ಥಗಿತಗೊಳಿಸಿತು. ಮನೆಗಳ ನಿರ್ಮಾಣಕ್ಕೆ ನಿಯಮಿತವಾಗಿ ಹಣದ ಹರಿವಿನ ನಿರೀಕ್ಷೆಯಲ್ಲಿ ಅವರು ತಮ್ಮ ಹಳೆಯ ಮನೆಗಳನ್ನು ನೆಲಸಮ ಮಾಡಿದ್ದರು.

ಫಲಾನುಭವಿಗಳ ಆಯ್ಕೆ, ಡಿಪಿಆರ್ ಅನುಮೋದನೆ ಮತ್ತು ಭಾರತ ಸರ್ಕಾರದಿಂದ ಕಂತುಗಳ ಬಿಡುಗಡೆಯ ನಡುವಿನ ಸಮಯದ ಅಂತರದಿಂದಾಗಿ ವಿಳಂಬವಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

**ಕಂಡಿಕೆ–4.2ರಲ್ಲಿ** ಚರ್ಚಿಸಿದಂತೆ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿನ ಕೊರತೆಯಿಂದಾಗಿ ಭಾರತ ಸರ್ಕಾರದ ಕಂತುಗಳ ಬಿಡುಗಡೆಯಲ್ಲಿ ವಿಳಂಬವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

## 4.4 ಅಪೂರ್ಣ ಮನೆಗಳ ಮೇಲೆ ಫಲಪ್ರದವಲ್ಲದ ವೆಚ್ಚ

ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳನ್ನು ಪೂರ್ಣಗೊಳಿಸಲು ಯೋಜನೆಯ ಮಾರ್ಗಸೂಚಿಗಳು ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿರಲಿಲ್ಲ. ಕಾರ್ಯಾದೇಶವನ್ನು ಜಾರಿ ಮಾಡಿದ 15 ದಿನಗಳಲ್ಲಿ ನಿರ್ಮಾಣವನ್ನು ಪ್ರಾರಂಭಿಸಬೇಕು ಮತ್ತು ಆರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಎಸ್‌ಎಲ್‌ಎನ್‌ಎ ಹೊರಡಿಸಿದ ಕಾರ್ಯಾದೇಶದಲ್ಲಿ ಸೂಚಿಸಲಾಗಿತ್ತು. 2016–18ರ ಅವಧಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ₹29.22 ಕೋಟಿ ಮೊದಲ ಕಂತು ಪಡೆದ 5352 ಬಿಎಲ್‌ಸಿ ಫಲಾನುಭವಿಗಳು ಮತ್ತು ₹57.95 ಕೋಟಿ ಎರಡನೇ ಕಂತು ಪಡೆದ 5173 ಫಲಾನುಭವಿಗಳು ಮುಂದಿನ ಕಂತುಗಳನ್ನು ಪಡೆಯಲು ಇನ್ನೂ ಮುಂದೆ ಬಂದಿರಲಿಲ್ಲ (ಮಾರ್ಚ್ 2021) ಎಂದು ಪಾವತಿಯ ದತ್ತಾಂಶಗಳ ವಿಶ್ಲೇಷಣೆಯಲ್ಲಿ ತಿಳಿದುಬಂದಿತು. ಕಾರ್ಯಾದೇಶ ನೀಡಿದ ದಿನಾಂಕದಿಂದ ಮೂರರಿಂದ ಐದು ವರ್ಷಗಳು ಕಳೆದರೂ ಈ ಮನೆಗಳು ಅಪೂರ್ಣವಾಗಿಯೇ ಉಳಿದಿದ್ದರಿಂದ ₹87.17 ಕೋಟಿ ವೆಚ್ಚ ಫಲಪ್ರದವಾಗಲಿಲ್ಲ.


ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ ನೆರವನ್ನು ಬಿಡುಗಡೆ ಮಾಡದಿರುವುದಕ್ಕೆ ಫಲಾನುಭವಿಗಳ ಜೋಡಣೆಯಲ್ಲಿನ ನಿಧಾನಗತಿಯ ಪ್ರಗತಿಯಿಂದಾಗಿ ಭಾರತ ಸರ್ಕಾರದ ಕಂತುಗಳ ಬಿಡುಗಡೆಯ ವಿಳಂಬಕ್ಕೆ ಅಧ್ಯಾರೋಪಿಸಿತು (ಸೆಪ್ಟೆಂಬರ್ 2021).

ಲೆಕ್ಕಪರಿಶೋಧನೆಯು ಮನೆಗಳನ್ನು ಪೂರ್ಣಗೊಳಿಸದಿರುವುದಕ್ಕೆ ಸಂಬಂಧಿಸಿದ್ದು ಮತ್ತು ಅದು ಫಲಾನುಭವಿಗಳಿಗೆ ಸಹಾಯದ ಬಿಡುಗಡೆಯಲ್ಲಿ ವಿಳಂಬದ ಬಗ್ಗೆಯಾಗಿರದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

## 4.5 ನೇರ ಪ್ರಯೋಜನ ವರ್ಗಾವಣೆ

2016–21ರಲ್ಲಿ 95671 ಬಿಎಲ್‌ಸಿ ಫಲಾನುಭವಿಗಳ ಖಾತೆಗೆ ₹2117.03 ಕೋಟಿ ಮೊತ್ತದ ಆರ್ಥಿಕ ನೆರವನ್ನು ನೇರವಾಗಿ ವರ್ಗಾಯಿಸಲಾಗಿದೆ. ಅವರ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (ಜಿಪಿಎಸ್) ಛಾಯಾಚಿತ್ರಗಳನ್ನು ಲೆಕ್ಕಪರಿಶೋಧನೆ ಮಾಡಲಾಯಿತು ಹಾಗೂ ಸರಿಯಾಗಿವೆ ಎಂದು ಕಂಡುಬಂದಿದೆ. ನೇರ ಪ್ರಯೋಜನ ವರ್ಗಾವಣೆಯನ್ನು (ಡಿಬಿಟಿ) ಆಗಸ್ಟ್ 2020ರವರೆಗೆ (ಆರ್‌ಜಿಹೆಚ್‌ಒಎಮ್‌ಎಸ್) ಮಾಹಿತಿ ತಂತ್ರಜ್ಞಾನ ವೇದಿಕೆಯ ಮೂಲಕ ಮತ್ತು ನಂತರ ಕರ್ನಾಟಕ ಸರ್ಕಾರದ ಸೆಂಟರ್ ಫಾರ್ ಇ–ಗವರ್ನೆನ್ಸ್, ಡಿಬಿಟಿ ಪ್ಲಾಟ್‌ಫಾರ್ಮ್ ಮೂಲಕ ನಡೆಸಲಾಯಿತು. ವ್ಯವಸ್ಥೆಯ ಕಾರ್ಯಾಚರಣೆಯನ್ನು ಕೆಳಗಿನ **ನಕ್ಷೆ–4.1**ರಲ್ಲಿ ನೀಡಲಾಗಿದೆ:

**ನಕ್ಷೆ–4.1: ನೇರ ಪ್ರಯೋಜನ ವರ್ಗಾವಣೆ ಪ್ರಕ್ರಿಯೆ**




ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ:

### 4.5.1 ದೃಢೀಕರಣವಿಲ್ಲದೇ ಬಿಎಲ್‌ಸಿ ಫಲಾನುಭವಿಗಳಿಗೆ ನೇರ ಪ್ರಯೋಜನ ವರ್ಗಾವಣೆ

**ಪಿಎಮ್‌ಎವೈ ಎಮ್‌ಐಎಸ್ ದತ್ತಸಂಚಯ**

- ಸಚಿವಾಲಯ, ರಾಜ್ಯ ಸರ್ಕಾರ, ಎಸ್‌ಎಲ್‌ಎನ್‌ಎ, ಯುಎಲ್‌ಬಿಗಳು ಮತ್ತು ಫಲಾನುಭವಿಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು ಪಿಎಮ್‌ಎವೈ ಎಮ್‌ಐಎಸ್‌ಅನ್ನು ಸಕ್ರಿಯಗೊಳಿಸಲಾಗಿದೆ
- ಅನುಮೋದಿತ ಯೋಜನೆಗಳಿಗೆ ಲಗತ್ತಿಸುವ ಸಮಯದಲ್ಲಿ ಫಲಾನುಭವಿಗಳ ಆಧಾರ್ ಸಂಖ್ಯೆಯ ದೃಢೀಕರಣವನ್ನು ಪರಿಶೀಲಿಸಲು ಯುಐಡಿಎಐ ಪ್ಲಾಟ್‌ಫಾರ್ಮ್‌ಗೆ ಸಂಯೋಜಿಸಲಾಗಿದೆ

ನಕಲು ಮಾಡುವುದನ್ನು ತಪ್ಪಿಸಲು ಮತ್ತು ಫಲಾನುಭವಿಗಳನ್ನು ದೃಢೀಕರಿಸಿ ಆ ಮೂಲಕ ಯೋಜನೆಗಳ ಅನುಮೋದನೆಯ ಸಮಯದಲ್ಲಿ ಅವರ ಅರ್ಹತೆಯನ್ನು ಖಚಿತಪಡಿಸಲು ಆಧಾರ್ ಸಂಖ್ಯೆ ಅಥವಾ ಉದ್ದೇಶಿತ ಫಲಾನುಭವಿಗಳ ಯಾವುದೇ ವಿಶಿಷ್ಟ ಗುರುತಿನ ವಿವರಗಳನ್ನು ದತ್ತಸಂಚಯದಲ್ಲಿ ಸಂಯೋಜಿಸುವುದನ್ನು ಪಿಎಮ್‌ಎವೈ(ಯು) ಮಾರ್ಗಸೂಚಿಗಳ ಕಂಡಿಕೆ–5.7 ಮತ್ತು 8.4, ಕಡ್ಡಾಯ ಮಾಡಿವೆ. ನೇರ ಪ್ರಯೋಜನ ವರ್ಗಾವಣೆ ಮಾಡುವ ಮೊದಲು, ಆಧಾರ್ ದೃಢೀಕರಣದ ಮೂಲಕ ಫಲಾನುಭವಿಯನ್ನು ಪಿಎಮ್‌ಎವೈ ಎಮ್‌ಐಎಸ್‌ಗೆ ಲಗತ್ತಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು.

ಪಿಎಮ್‌ಎವೈ ಎಮ್‌ಐಎಸ್ ದತ್ತಾಂಶದೊಂದಿಗೆ ಕೇಂದ್ರ ಮತ್ತು ರಾಜ್ಯಗಳ ಪಾಲು ಬಿಡುಗಡೆಗೆ ಸಂಬಂಧಿಸಿದ ದತ್ತಾಂಶದ ಮ್ಯಾಪಿಂಗ್‌ನಲ್ಲಿ, ನೇರ ಪ್ರಯೋಜನ ವರ್ಗಾವಣೆ ಮೂಲಕ ರಾಜ್ಯ ಮತ್ತು ಕೇಂದ್ರದ ಪಾಲನ್ನು

ಬಿಡುಗಡೆ ಮಾಡಿದ 62,648 ಬಿಎಲ್‌ಸಿ ಫಲಾನುಭವಿಗಳಲ್ಲಿ 12,757 ಫಲಾನುಭವಿಗಳನ್ನು (ಶೇಕಡಾ 20) ಎಮ್‌ಐಎಸ್ ದತ್ತಸಂಚಯಕ್ಕೆ ಲಗತ್ತಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಮಾರ್ಗಸೂಚಿಯಲ್ಲಿ ಸೂಚಿಸಲಾದ ದೃಢೀಕರಣ ಪ್ರಕ್ರಿಯೆಯಿಲ್ಲದೆ ಈ 12757 ಫಲಾನುಭವಿಗಳಿಗೆ ₹172.64 ಕೋಟಿ ಪಾವತಿ ಮಾಡಲಾಗಿದೆ. ಇದು ಫಲಾನುಭವಿಗಳ ಒಂದಕ್ಕಿಂತ ಹೆಚ್ಚು ಯೋಜನೆಗಳಿಗೆ ಲಗತ್ತಿಸುವಿಕೆಗೆ ಮತ್ತು ಈ ಕೆಳಗೆ ವಿವರಿಸಿದಂತೆ ಫಲಾನುಭವಿಗಳಿಗೆ ನಕಲು ಪಾವತಿಗೆ ಕಾರಣವಾಯಿತು:

#### *4.5.1.1. ಆರ್ಥಿಕ ನೆರವಿನ ಅಧಿಕ ಪಾವತಿ ₹1.30 ಕೋಟಿ*

ನೇರ ಪ್ರಯೋಜನ ವರ್ಗಾವಣೆ ಮೂಲಕ ಪಾವತಿಗಳ ದೃಢೀಕರಣ ಮತ್ತು ಬಿಡುಗಡೆಗಾಗಿ ಫಲಾನುಭವಿ ಕೋಡ್ ಗುರುತಿನ ಕ್ಷೇತ್ರವಾಗಿದೆ. ಆದ್ದರಿಂದ ನಕಲು ಪಾವತಿಗಳನ್ನು ತಡೆಯಲು ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ತಡೆಯಲು ವ್ಯವಸ್ಥೆಯು ನಿಯಂತ್ರಣ ಕಾರ್ಯವಿಧಾನವನ್ನು ಹೊಂದಿರಬೇಕು.

ಒಂದೇ ಫಲಾನುಭವಿಗೆ ನಕಲಿ ಪಾವತಿಗಳನ್ನು ಸುಗಮಗೊಳಿಸಿದ ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ವ್ಯವಸ್ಥೆಯು ಅನುಮತಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉದಾಹರಣೆಗೆ, ಕೇಂದ್ರ ಮತ್ತು ರಾಜ್ಯ ನೆರವಿನ ಬಿಡುಗಡೆಗಾಗಿ ವಿವಿಧ ಫಲಾನುಭವಿ ಕೋಡ್‌ಗಳನ್ನು ರಚಿಸಲಾಗಿತ್ತು. 71 ಪ್ರಕರಣಗಳಲ್ಲಿ (**ಅನುಬಂಧ**–4.1) ಕೇಂದ್ರ ಸಹಾಯದಡಿಯಲ್ಲಿ ಪ್ರಯೋಜನಗಳನ್ನು ಮತ್ತು 40 ಪ್ರಕರಣಗಳಲ್ಲಿ (**ಅನುಬಂಧ**–4.2) ರಾಜ್ಯ ಸಹಾಯದ ಅಡಿಯಲ್ಲಿ ಪ್ರಯೋಜನಗಳನ್ನು ಒಂದೇ ಫಲಾನುಭವಿಗೆ ಎರಡು ಬಾರಿ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಪಾವತಿಯ ದತ್ತಾಂಶದ ವಿಶ್ಲೇಷಣೆಯು ತಿಳಿಯಪಡಿಸಿತು. ಮೇಲಿನ ಫಲಾನುಭವಿಗಳಿಗೆ ಮಾಡಿದ ಹೆಚ್ಚುವರಿ ಪಾವತಿಯು ₹1.30 ಕೋಟಿಗಳಾಗಿತ್ತು. ಹೀಗೆ, ಒಂದೇ ಫಲಾನುಭವಿಗೆ ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯು ನೇರ ಪ್ರಯೋಜನ ವರ್ಗಾವಣೆ ಪಾವತಿಗಳನ್ನು ಬಿಡುಗಡೆ ಮಾಡುವ ಮೊದಲು ದೋಷಪೂರಿತ ದೃಢೀಕರಣ ನಿಯಂತ್ರಣಗಳಿಗೆ ಕಾರಣವಾಯಿತು.

ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಳ್ಳುವಾಗ ರಾಜ್ಯ ಸರ್ಕಾರವು (ಸೆಪ್ಟೆಂಬರ್ 2021) ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ತಡೆಯಲು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಅಗತ್ಯ ನಿಯಂತ್ರಣಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿತು. ಆದಾಗ್ಯೂ, ಸರ್ಕಾರವು ವಿವರವಾದ ತನಿಖೆಯನ್ನು ನಡೆಸಬೇಕಾಗಿತ್ತು ಮತ್ತು ಸಂಭವಿಸಿದ ಲೋಪಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.